

ಸಿರಿಯಾ ಐಸಿಸ್ ಉಗ್ರರ ದೌರ್ಜನ್ಯ, ದಬ್ಬಾಳಿಕೆಗಳಿಂದ ತತ್ತರಿಸಿರುವ ದೇಶ. ಅಲ್ಲಿ ಮಾನವ ಹಕ್ಕುಗಳ ಉಲ್ಲಂಘನೆ ಆಗುತ್ತಿದೆ. ಮಕ್ಕಳು ಸೇರಿದಂತೆ ಲಕ್ಷಾಂತರ ನಾಗರಿಕರು ಹಿಂಸಾಚಾರಕ್ಕೆ ಬಲಿಯಾಗಿದ್ದಾರೆ. ಅಸಂಖ್ಯ ಜನ ದೇಶ ತೊರೆದು ಓಡಿ ಹೋಗಿದ್ದಾರೆ. ನೆರೆಯ ಲೆಬನಾನ್, ಟರ್ಕಿ, ಜೋರ್ಡಾನ್ ಮತ್ತಿತರ ದೇಶಗಳ ನಿರಾಶ್ರಿತರ ಶಿಬಿರಗಳಲ್ಲಿ ಆಶ್ರಯ ಪಡೆದಿದ್ದಾರೆ. ಐಸಿಸ್ ಉಗ್ರರು, ಸಿರಿಯಾ ಸೇನೆ, ಅಧ್ಯಕ್ಷ ಬಷರ್ ಅಲ್ ಅಸದ್ ಪರ ಹಾಗೂ ವಿರೋಧಿ ಪಡೆಗಳು ನಡೆಸುತ್ತಿರುವ ಯುದ್ಧ ಮಾದರಿಯ ದಾಳಿ ಹಾಗೂ ಪ್ರತಿದಾಳಿಗಳೇ ಅಲ್ಲದೆ ಮಾನವ ಹಕ್ಕುಗಳ ರಕ್ಷಣೆ ಹೆಸರಿನಲ್ಲಿ ಅಮೆರಿಕ ಮತ್ತಿತರ ದೇಶಗಳು ನಡೆಸುತ್ತಿರುವ ವೈಮಾನಿಕ ದಾಳಿಗಳಿಂದ ಸಿರಿಯಾ ಅಕ್ಷರಶಃ ಕಂಗೆಟ್ಟಿದೆ.